**ಕವಿತೆ**




## ರವಿ ಪಾಟೀಲ್

ಕಲೆ: ಎಸ್.ವಿ. ಹೂಗಾರ್


# ಪುನರುತ್ಥಾನ



ಹೇಳು ಗೆಳತೀ ನಿನ್ನ ಕಂಗಳ ಕೊಳದಲ್ಲಿ ಈಜಾಡುವ ನಕ್ಷತ್ರಗಳಿಗೇಕೆ
ಅಷ್ಟೊಂದು ಸಲಿಗೆ ಕೊಟ್ಟಿದ್ದೀಯಾ?
ಅಗೋ ಅಲ್ಲಿ ಬಾನಿನಲ್ಲಿ
ಚಂದ್ರ ಮೂರ್ಛೆಹೋಗಿ ಬೀಳುತ್ತಿದ್ದಾನೆ
ಇದೀಗ ಉದಯಿಸಿದ ಸೂರ್ಯನೂ
ತಲೆಮರೆಸಿಕೊಳ್ಳುತ್ತಿದ್ದಾನೆ

ಸಮುದ್ರದ ಅಲೆಗಳನ್ನೆಲ್ಲಾ ಎದುರುಹಾಕಿಕೊಂಡು
ಕೂತಿರುವೆನು ನಾನು
ನನ್ನಾತ್ಮಕ್ಕೆ ಗುರಿಹೇರಿರುವ ಆಗಂತುಕನನ್ನು
ಎದುರುಹಾಕಿಕೊಂಡು

ಹೆಜ್ಜೆಗಳೆಲ್ಲಾ ಮುಗಿದುಹೋಗಿವೆ
ದಾರಿಯೊಂದು ಉಳಿದುಕೊಂಡಿದೆ
ದಿಟ್ಟಿಸಿ ನೋಡಿದರೆ ಅದೂ ಹಿಗ್ಗುತ್ತಿರುವಂತೆ ಕಾಣುತ್ತಿದೆ
ದಾರಿಮಧ್ಯೆ ಅದೆಷ್ಟೋ ಕಲ್ಪವೃಕ್ಷಗಳನ್ನು ನೋಡಿಬಂದೆ
ಹೆಜ್ಜೆಗೊಬ್ಬೊಬ್ಬರು ಬುದ್ಧ ಬಸವ ಅಲ್ಲಮರು
ಚೂಪುಗತ್ತಿಯ ಅವರುಗಳೆಲ್ಲ ಚರಮಗೀತೆಗಳನ್ನು
ಹಾಡಿಕೊಂಡು ಕೂತಿದ್ದಾರೆ
ಬದುಕನ್ನು ಸೊನ್ನೆಯಿಂದ
ಗುಣಿಸಿಕೊಂಡು
ಅವರ ಅಂಗೈಗಳನ್ನು ಮೂಸಿಬಂದೆ
ಗಬ್ಬು ನಾತ
ಜಗದ ಕೊಳೆಗಳನ್ನೆಲ್ಲಾ ಅಂಗೈಗಳಲ್ಲಿ ಹಿಡಿದುಕೊಂಡು
ಕೂತಿದ್ದಾರೆ ಅವರು
ನಾನಾದರೋ ನಿನ್ನ ನೆನಹುಗಳಲ್ಲಿ ಕಾಲ ತಳ್ಳುತ್ತಿದ್ದೇನೆ
ಹಿಡಿಹಿಡಿ ಕೋಟಲೆಗಳ ಹೆಗಲೇರಿಸಿ ಕೂತಿರುವ ಅವರ
ಗತಿಯೇನು?